ಸೆಳೆದುಕೊಳ್ಳಲು ಫ್ರ್ಯಾಂಚೈಸಿಗಳು ಅಪಾರ ಪೈಪೋಟಿಗಿಳಿದವು. ಅಂತಿಮವಾಗಿ ₹27 ಕೋಟಿ ದಾಖಲೆ ಮೊತ್ತಕ್ಕೆ ಪಂತ್ ಅವರನ್ನು ಲಖನೌ ಸೂಪರ್ ಜೈಂಟ್ಸ್ ಖರೀದಿಸಿದೆ. ಈ ಮೂಲಕ ಐಪಿಎಲ್ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೌಲ್ಯ ಪಡೆದ ಆಟಗಾರನೆಂಬ ಹೆಗ್ಗಳಿಕೆಗೆ ರಿಷಭ್ ಪಾತ್ರರಾಗಿದ್ದಾರೆ.

ಕಳೆದ ವರ್ಷ ₹24.75 ಕೋಟಿ ಗಳಿಸಿದ್ದ ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ಹೆಸರಿನಲ್ಲಿ ಅತಿ ದುಬಾರಿ ಆಟಗಾರ ಎನ್ನುವ ದಾಖಲೆಯಿತ್ತು. ಉತ್ತರಾಖಂಡದ 27 ವರ್ಷದ ರಿಷಭ್ ಹತ್ತು ವರ್ಷಗಳ ಹಿಂದೆಯಷ್ಟೇ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ರಣಜಿ ಆಡಿದ ಮರುವರ್ಷದ ಋತುವಿನಲ್ಲಿಯೇ ಮಹಾರಾಷ್ಟ್ರ ವಿರುದ್ಧದ ಪಂದ್ಯದಲ್ಲಿ 308 ರನ್ ಗಳಿಸಿ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ತ್ರಿಶತಕ ಗಳಿಸಿದ ಭಾರತದ ಕಿರಿಯ ಆಟಗಾರ ಎನ್ನುವ ಗೌರವ ಪಡೆದಿದ್ದರು.

ಆಕ್ರಮಣಕಾರಿ ಬ್ಯಾಟಿಂಗ್, ಚುರುಕಿನ ಪಾದಚಲನೆ, ವಿಕೆಟ್‌ಗಳ ಹಿಂದೆ ಪಾದರಸದ ವೇಗ, ತಂಡವನ್ನು ಸಂಘಟಿಸುವ ಶಕ್ತಿಯಿಂದಾಗಿ 2016–17ರ ವಿಜಯ ಹಜಾರೆ ಟೂರ್ನಿಯಲ್ಲಿ ದೆಹಲಿ ತಂಡದ ನಾಯಕರಾದರು. ದೇಶಿ ಟೂರ್ನಿಗಳಲ್ಲಿ ತೋರಿದ ಪ್ರದರ್ಶನ ಅವರನ್ನು ರಾಷ್ಟ್ರೀಯ ತಂಡದಲ್ಲಿ ಅವಕಾಶ ಪಡೆಯುವಂತೆ ಮಾಡಿತು. 2016ರಲ್ಲಿ 19 ವರ್ಷದ ಒಳಗಿನವರ ವಿಶ್ವಕಪ್‌ನಲ್ಲಿ ತೋರಿದ ಪ್ರದರ್ಶನ ಪರಿಗಣಿಸಿ ಅದೇ ವರ್ಷ ಐಪಿಎಲ್‌ನಲ್ಲಿ ಡೆಲ್ಲಿ ಡೇರ್‌ಡೆವಿಲ್ಸ್ ಅವರನ್ನು ಖರೀದಿಸಿತು. ಕಡಿಮೆ ವರ್ಷದಲ್ಲಿ ಹಲವು ದಾಖಲೆಗಳ ಒಡೆಯರಾದ ಪಂತ್, 2021ರಲ್ಲಿ ಬದಲಾದ ಡೆಲ್ಲಿ ಕ್ಯಾಪಿಟಲ್ಸ್ ಹೆಸರಿನ ತಂಡಕ್ಕೆ ನಾಯಕರಾದರು. ರಿಷಭ್ ಐಪಿಎಲ್‌ನಲ್ಲಿ 111 ಪಂದ್ಯಗಳನ್ನಾಡಿದ್ದು 3,284 ರನ್ ಗಳಿಸಿದ್ದಾರೆ. ಅಜೇಯ 128 ಅವರ ವೈಯಕ್ತಿಕ ಗರಿಷ್ಠ ಸ್ಕೋರು. ಅವರ ಬ್ಯಾಟ್‌ನಿಂದ 296 ಬೌಂಡರಿಗಳು ಹಾಗೂ 154 ಸಿಕ್ಸರ್‌ಗಳು ಸಿಡಿದಿವೆ. ಆ ಆಕ್ರಮಣಕಾರಿ ಆಟಕ್ಕಾಗಿಯೇ ರಿಷಭ್ ಕೋಟ್ಯಂತರ ಕ್ರಿಕೆಟ್ ಪ್ರೇಮಿಗಳ ಕಣ್ಮಣಿಯಾಗಿದ್ದಾರೆ.

## ಶ್ರೇಯಸ್ ಅಯ್ಯರ್

ಭಾರತ ತಂಡದ ಮಧ್ಯಮ ಕ್ರಮಾಂಕದ ಶಕ್ತಿ ಎನಿಸಿರುವ ಶ್ರೇಯಸ್ ಅಯ್ಯರ್ ಅವರನ್ನು ಈ ಬಾರಿ ಕೋಲ್ಕತ್ತ ನೈಟ್ ರೈಡರ್ಸ್ ₹26.75 ಕೋಟಿಗೆ ಖರೀದಿಸಿದೆ.

ಹತ್ತು ವರ್ಷಗಳಿಂದ ಐಪಿಎಲ್‌ನಲ್ಲಿ ಆಡುತ್ತಿರುವ ಮುಂಬೈನ ಶ್ರೇಯಸ್ ಅವರನ್ನು 2015ರಲ್ಲಿ ಡೆಲ್ಲಿ ಡೇರ್‌ಡೆವಿಲ್ಸ್ ತಂಡ ₹2.6 ಕೋಟಿಗೆ ಖರೀದಿಸಿತ್ತು. ಆ ವರ್ಷ ಹೆಚ್ಚು ಬೆಲೆಗೆ ಮಾರಾಟವಾದ 'ಅನ್ ಕ್ಯಾಪ್ಡ್' ಆಟಗಾರ ಎನ್ನುವ ಕೀರ್ತಿ ಗಳಿಸಿದ್ದರು. 2018ರಲ್ಲಿಯೇ ಡೆಲ್ಲಿ ತಂಡ ಅವರನ್ನು ಉಳಿಸಿಕೊಂಡಿತ್ತಲ್ಲದೇ, ಈಗಿನ ಭಾರತ ತಂಡದ ಕೋಚ್ ಗೌತಮ್ ಗಂಭೀರ್ ಅವರನ್ನು ಕೈಬಿಟ್ಟು ತಂಡದ ನಾಯಕನನ್ನಾಗಿಯೂ ಮಾಡಿತು. ಐಪಿಎಲ್ ಇತಿಹಾಸದಲ್ಲಿ 23




ಶ್ರೇಯಸ್ ಅಯ್ಯರ್: ಕೋಲ್ಕತ್ತ ನೈಟ್ ರೈಡರ್ಸ್‌ನ ಭರವಸೆ

## ಟಿ–20ಗೆ ಬೇಕು ಹೆಚ್ಚು ಫಿಟ್‌ನೆಸ್

**–ಯರೇಗೌಡ,** ಕರ್ನಾಟಕ ಕ್ರಿಕೆಟ್ ತಂಡದ ಮಾಜಿ ಕೋಚ್



ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಟೆಸ್ಟ್, ಏಕದಿನ ಹಾಗೂ ಟ್ವೆಂಟಿ–20 ಹೀಗೆ ಯಾವುದೇ ಮಾದರಿಯ ಆಟದಲ್ಲಿ ಪರಿಣಾಮಕಾರಿ ಪ್ರದರ್ಶನ ನೀಡಲು ಪ್ರತಿ ಆಟಗಾರನಿಗೂ ಫಿಟ್‌ನೆಸ್ ಸಾಕಷ್ಟು ಬೇಕಾಗುತ್ತದೆ. ಐಪಿಎಲ್‌ನಿಂದಾಗಿ ಕ್ರಿಕೆಟ್‌ನಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಹೊಸ ಆಟಗಾರರಿಗೆ ಹೇರಳ ಅವಕಾಶಗಳು ಲಭಿಸಿವೆ.

17 ವರ್ಷಗಳ ಹಿಂದೆ ಬಂದ ಹೊಸ ಮಾದರಿ ಮತ್ತು ಮುಂದೆಬರುವ ಹೊಸತನಗಳು ಕ್ರಿಕೆಟ್ ಬೆಳವಣಿಗೆಗೆ ಹೊಸ ಸ್ವರೂಪವನ್ನು ನೀಡುತ್ತವೆ. ಭಾರತದ ಆಟಗಾರರು ಐಪಿಎಲ್ ಮಾತ್ರವಲ್ಲ; ಟೆಸ್ಟ್‌ನಲ್ಲಿಯೂ ಉತ್ತಮ ಪ್ರದರ್ಶನ ತೋರಬಲ್ಲ ಶಕ್ತಿ ಹೊಂದಿದ್ದಾರೆ. ಪ್ರತಿ ಟೂರ್ನಿಗಳು ಆಟಗಾರರರಿಗೆ ಹೊಸ ಅವಕಾಶಗಳನ್ನು ನೀಡುತ್ತಿವೆ. ಆಯಾ ಟೂರ್ನಿಗಳ ಸಾಮರ್ಥ್ಯಕ್ಕೆ ತಕ್ಕಂತೆ ಆಟಗಾರರು ಕೂಡ ಫಿಟ್‌ನೆಸ್ ಕಾಯ್ದುಕೊಳ್ಳುತ್ತಿದ್ದಾರೆ. ಇದೇ ಕಾರಣಕ್ಕಾಗಿ ಹಲವು ಆಟಗಾರರು ಸಣ್ಣ ವಯಸ್ಸಿನಲ್ಲಿಯೇ ದೇಶದ ತಂಡದಲ್ಲಿ, ಐಪಿಎಲ್‌ನಲ್ಲಿ ಆಡುವ ಅವಕಾಶ ಪಡೆದುಕೊಳ್ಳುತ್ತಿದ್ದಾರೆ. ಹೊಸ ಟೂರ್ನಿ ಆಟಗಾರನಿಗೆ ಅನುಕೂಲವಾಗುತ್ತದೆ.